# ಮಹಾಪ್ರಸ್ಥಾನದೊಂದಿಗೆ ಮರುಹುಟ್ಟಿಗೆ ಬೀಜ

ನಾನು ಬೀಳಲು ಕಾರಣವಾದ ಅಂಶಗಳ ಬಗ್ಗೆ ಯಾರಿಗೂ ಚಿಂತೆಯೇ ಇರಲಿಲ್ಲ. ಲಾಕ್‌ಡೌನ್ ಕಾರಣದಿಂದಾಗಿ ನನ್ನ ಬೇರುಗಳನ್ನು ಕಡಿದು ನನ್ನನ್ನು ಬೀಳಿಸಿರುವ ವಿಚಾರ ಮುದ್ದುವೀರಪ್ಪನಿಗಾಗಲೀ, ಯಮುನಪ್ಪನಿಗಾಗಲೀ, ಗೊತ್ತಾಗಲೇ ಇಲ್ಲ. ಅಂಥ ಜಾಗದಲ್ಲಿ ಈಗ ನೀರು ತುಂಬಿಕೊಂಡಿದ್ದರಿಂದ ಕೃತ್ಯದ ಹಿಂದಿನ ಕ್ರೌರ್ಯ ಯಾರಿಗೂ ಕಾಣಲೂ ಇಲ್ಲ... ಎಲ್ಲರೂ ನನಗೆ ತೀರಾ ವಯಸ್ಸಾಗಿದ್ದು, ಆ ಬಿರುಸಾದ ಮಳೆಯ ಅಬ್ಬರಕ್ಕೇ ಬಿದ್ದುಬಿಟ್ಟಿರುವೆನೆಂದು ಭಾವಿಸಿದ್ದರು.

ಬೆಳಗ್ಗೆ ತನ್ನ ತಂಡದೊಂದಿಗೆ ಬಂದ ಪ್ರಶಾಂತ ನಾಯಕ, ನನ್ನ ಕೊಂಬೆಗಳನ್ನು ಕಡಿದು ಕಾಂಡವನ್ನು ತಾಯಿಬೇರುಸಹಿತ ಕ್ರೇನಿನ ಸಹಾಯದಿಂದ ಎತ್ತಿ, ಎಂಬಭತ್ತಾರು ಚಕ್ರದ ಬೃಹತ್ ಲಾರಿಯಲ್ಲಿ ಸಾಗಿಸಿಕೊಂಡು ಹೋಗಿ ಗಾಂಧಿ ಪಾರ್ಕಿನ ಮಧ್ಯದಲ್ಲಿ ಸ್ಮಾರಕದಂತೆ ನೆಡುವುದೆಂದು ಯೋಜನೆ ರೂಪಿಸಿದ. ಹಾಗೆಂದು ಒಂದು ಅಭಿಪ್ರಾಯವನ್ನು ಆತ ಟಿ.ವಿ.ಯೊಂದರ ವರದಿಗಾರನ ಮುಂದೆ ಹೇಳಿದ್ದೇ ತಡ, ಊರಿಗೆ ಊರೇ ಹೌದೌದೆಂದು ತಲೆದೂಗಿತು. ಅಲ್ಲಿಗೆ ನನ್ನನ್ನು ನೇರವಾಗಿ ಸಾಯಲು ಬಿಡದೇ ಐ.ಸಿ.ಯು.ನಲ್ಲಿ ಇಟ್ಟು ಸಾಯಿಸುತ್ತಾರೆಂಬುದು ಖಾತ್ರಿಯಾಗಿಹೋಯಿತು. ಇಲ್ಲ ನಾನು ಸಾಯಬೇಕು, ನನ್ನ ಕರುಳುಬಳ್ಳಿಯನ್ನು ಕತ್ತರಿಸಿ ನನ್ನ ಪಾಡಿಗೆ ನನ್ನನ್ನು ಸಾಯಲು ಬಿಡಿ ಎಂದು ಎಷ್ಟೇ ಗೋಗರೆದರೂ ನನ್ನ ಆರ್ತನಾದ ಅವರ್‍ಯಾರಿಗೂ ಕೇಳುವಂತಿರಲಿಲ್ಲ.

ನನ್ನ ಅವಸಾನದ ಸುದ್ದಿಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ವರದಿಗಾರರು ತಂದಾಗ, ನನ್ನ ನೆರಳಲ್ಲಿ ಆಡಿ, ಬೆಳೆದು, ಈ ಸ್ಥಾನದವರೆಗೂ ಬೆಳೆದ ವಿವಿಧ ಸಂದರ್ಭಗಳನ್ನು ನೆನಪಿಸಿಕೊಂಡು ಕಣ್ಣಂಚಲ್ಲಿ ನೀರಾಡಿ ಒರೆಸಿಕೊಂಡರು. ಈ ಮಸಲತ್ತಿನಲ್ಲಿ ತನ್ನದೂ ಪಾಲು ಇದ್ದರೂ ಉದ್ದುದ್ದ ಭಾಷಣ ಬಿಗಿದು ಜನರನ್ನು ಮರುಳುಮಾಡಿದ ಮುಖ್ಯಮಂತ್ರಿ ಹೀರೋ ಆಗಿಬಿಟ್ಟರು. ಪ್ರಶ್ನೆ ಕೇಳಿ ಕೇಳಿ ಅವರಾಳದ ಅಭಿಪ್ರಾಯವನ್ನು ಕೆದಕುತ್ತಿದ್ದ ವಾಹಿನಿಯೊಂದರ ವರದಿಗಾರ, ಪ್ರಶಾಂತನಾಯಕನ ಆಲೋಚನೆಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದಂತೆಯೇ, ಕೊರೊನಾ ಕಾರಣಕ್ಕೆ ಮಾಸ್ಕ್ ಹಾಕಿದ್ದರಿಂದ ಮುಖಚಹರೆಯನ್ನು ಯಾರೂ ಗಮನಿಸಲು ಸಾಧ್ಯವಿಲ್ಲವೆಂಬ ಭರವಸೆಯಿಂದ ಹುಸಿನಗೆಯನ್ನು ಮರೆಮಾಚಿ ಕಣ್ಣಲ್ಲಿ ಮಿಂಚನ್ನು ಸಂಚರಿಸಿದಂತೆ

